ತುಂಬಾ ಚೆಲ್ಲಾಡಿತು! ಮೀನಿನ ವಾಸನೆ ಸುತ್ತ ಹರಡಿ ನೆರೆದಿದ್ದ ಎಲ್ಲರ ಮೂಗಿಗೂ ಬಡಿಯಿತು. ನಾಯಿಯ ಜೊತೆಗಾರ ಪೊಲೀಸ್ ಮಹಾ ಬುದ್ಧಿವಂತನೆಂಬಂತೆ ತಾನೂ ಮೂಗಿಗೆ ಬಟ್ಟೆ ಕಟ್ಟಿ ನಾಯಿಯೊಂದಿಗೆ ಒಳನುಗ್ಗಿದ. ನೋಡಿದರೆ ಇನ್ನೂ ಒಂದು ಪ್ಲಾಸ್ಟಿಕ್ ಗಂಟು! 'ಅದೇ ನಾಯಿಯ ಗುರಿ' ಎಂದುಕೊಂಡು ಅದರ ಮೂತಿಯನ್ನು ಪ್ಲಾಸ್ಟಿಕ್ಕಿನ ಮುಖಕ್ಕಿಟ್ಟ. ನಾಯಿ ಅದನ್ನು ಮೂಸಿದ್ದೇ 'ಯುರೇಕಾ' ಎಂದುಕೊಳ್ಳುತ್ತಾ ಓಡಿಹೋಗಿ ಜೀಪಿನಲ್ಲಿ ಕುಳಿತಿತು. ಅದೇನಾಗಿರಬಹುದು ಎಂದು ಸಬ್ ಇನ್ಸ್‌ಪೆಕ್ಟರ್ ಕೋಲಿನ ಕಾನ್‌ಸ್ಟೇಬಲ್‌ಗೆ ಹೇಳಿದ. ನೋಡಿದರೆ ಕೊಳೆತ ಕೋಳಿ ಮಾಂಸ!

ನಾಯಿಯ ಆಣತಿಯಂತೆ ಪೊಲೀಸರು ಹೊರಡಲೇ ಬೇಕಾಯಿತು. ಒಬ್ಬ ಕಾನ್‌ಸ್ಟೇಬಲನ್ನು ಅಲ್ಲಿ ಬಿಟ್ಟು ಮಿಕ್ಕವರೆಲ್ಲ ಜೀಪು ಹತ್ತಿದರು. ಚಿಕನ್ ಅನ್ನು ಪ್ಲಾಸ್ಟಿಕ್ ಚೀಲದಲ್ಲಿ ಕಟ್ಟಿಕೊಟ್ಟ ಅಂಗಡಿಯಾತನ ಹಿಂದೆ ನಾಯಿ ಹೋದುದಿರಬಹುದೆಂದು ಮಿಕ್ಕವರು ಅಂದಾಜಿಸಿದರು. ಮನೆಯೊಳಗಿನ ಪಾಡನ್ನು ನೋಡಲೆಂದು ಡಾ. ಗಣೇಶ್, ಪ್ರೊಫೆಸರನ್ನು ಕೈಹಿಡಿದು ನಡೆಸಿಕೊಂಡು ಒಳಗೊಯ್ದರು. ಜೊತೆಗೆ ಬಂದವರೆಲ್ಲ ಏನನ್ನೋ ಹುಡುಕುವವರಂತೆ ಸುತ್ತಮುತ್ತ ನೋಡುತ್ತಿದ್ದರು. ಹೆಚ್ಚು ಜನ ಒಳನುಗ್ಗದಂತೆ ಪೊಲೀಸರು ಜಾಗ್ರತೆ ವಹಿಸಿದ್ದರು. ಯಾವುದನ್ನೂ ಲೆಕ್ಕಿಸದ ಪ್ರೊಫೆಸರ್ ಒಳಗೆ ಬಂದವರೇ ಸೋಫಾದ ಮೇಲೆ ಕುಸಿದು ಕುಳಿತರು. ಫಿಂಗರ್ ಪ್ರಿಂಟು ತೆಗೆಯ ಬಂದವರು ಅವರ ಪಾಡಿಗೆ ಕೆಲಸ ಮುಗಿಸಿ ಹೊರಟು ಹೋದರು. ಅತಿಥಿಯಾಗಿ ಊರಿಗೆ ಬಂದಿದ್ದ ನಟರಾಜ ಪಟ್ಟಣಶೆಟ್ಟಿಯವರು ಮಾತ್ರ 'ತಾನು ಮಹತ್ತರ ಜವಾಬ್ದಾರಿಯನ್ನು ನಿರ್ವಹಿಸಬೇಕಾದವ' ಎಂಬಂತೆ ಅತ್ತ ಇತ್ತ ನಡೆದಾಡುತ್ತಿದ್ದರು. ಒಳಚಿಲಕ ಮುರಿದ ಮುಂಬಾಗಿಲು, ಚೆಲ್ಲಿದ ತರಕಾರಿ, ಆ್ಯಪಲ್‌ಗಳು, ಅಸ್ತವ್ಯಸ್ತ ಹಾಸಿಗೆ, ಕೈಮುರಿದ ಕಪಾಟ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದರು. ಹೀಗೆ ತರಕಾರಿ, ಹಣ್ಣುಗಳು, ಮೀನು, ಚಿಕನಿನ ಪೊಟ್ಟಣಗಳು ಚೆಲ್ಲಿಹೋಗಲು ಕಾರಣ ಏನಿರಬಹುದು? ಅವನ್ನೆಲ್ಲ ಒಂದರಲ್ಲೇ ತುಂಬಿಸಿ ತಂದ ಚೀಲ ಎಲ್ಲಿ ಹೋಗಿರಬಹುದು? ಮುಂತಾದ ಸೂಕ್ಷ್ಮ ಪ್ರಶ್ನೆಗಳು ನಟರಾಜರನ್ನು ಕಾಡತೊಡಗಿದುವು.

ತರಕಾರಿ ತರುವುದಕ್ಕೆ ದೀಪೂ ಸಾಧಾರಣವಾಗಿ ಒಯ್ಯುತ್ತಿದ್ದ ಚೀಲ ಯಾವ ತೆರನಾದುದು ಎಂಬುದನ್ನು ನಟರಾಜ್, ಪ್ರೊಫೆಸರ್‌ರನ್ನು ವಿಚಾರಿಸಿ ತಿಳಿದುಕೊಳ್ಳಲೆತ್ನಿಸಿದರು. ಅವರಿಗೂ ಅದರ ಬಗ್ಗೆ ವಿಶೇಷ ಮಾಹಿತಿ ಇರಲಿಲ್ಲ. ಚೀಲದ ಒಂದು ಬದಿಯಲ್ಲಿ ಎರಡು ನವಿಲಿನ ಚಿತ್ರವಿರುವುದನ್ನು ಮದುವೆಯಾದ ಹೊಸತರಲ್ಲಿ ಶೀಲಾ ತನಗೆ ತೋರಿಸಿ, 'ಇದು ಜಾನಮ್ಮ ಮದುವೆಯ ದಿನ ತನಗಾಗಿ ಕೊಟ್ಟದ್ದು' ಎಂದು ಹೇಳಿದ್ದನ್ನು ಪ್ರೊಫೆಸರ್ ಸ್ಮರಿಸಿಕೊಂಡರು. ಬೇರೆ ಯಾವುದೇ ಚೀಲ ಅಲ್ಲಿ ಕಾಣಿಸಲಿಲ್ಲ. ದೀಪೂವಿನ ಮೇಲೆ ಸಂದೇಹ ಅಧಿಕವಾಗುತ್ತ ಸಾಗಿತು. ಡಾ. ಗಣೇಶ್ ಕೂಡ ಹಿಂದಿನ ದಿನ ಶೀಲಾಳಿಗೆ ದೀಪೂ

## ಕಳೆದ ಸಂಚಿಕೆಯಲ್ಲಿ



ಒಡತಿ ಶೀಲಾಳ ಸುರಕ್ಷತೆಯ ಬಗ್ಗೆ ವಿಪರೀತ ಗಮನ ಕೊಡತೊಡಗಿದ ದೀಪೂವಿಗೆ, ತುಂಬು ಯೌವನದ ಒಡತಿಯನ್ನು ಮರೆತು ಪ್ರೊ. ಭಾಸ್ಕರ್ ತಮ್ಮ ಕೆಲಸಗಳಲ್ಲಿ ಮುಳುಗಿಹೋಗುವುದು ಅಚ್ಚರಿ ಎನ್ನಿಸುತ್ತಿತ್ತು. ಒಡತಿಯ ಬಗ್ಗೆ ಅಪಾರ ಗೌರವವಿದ್ದರೂ, ಆಕೆಯ ಸಾಮೀಪ್ಯ ಅವನಲ್ಲಿ ರೋಮಾಂಚನ ಉಂಟುಮಾಡುತ್ತಿತ್ತು. ಶೀಲಾಳ ಖಾಸಗಿ ಕೋಣೆಯೊಳಗೂ ಪ್ರವೇಶ ಪಡೆದಿದ್ದ ಅವನಿಗೆ, ಆ ಅವಕಾಶ ಒಡತಿಯ ಬದುಕಿನ ಪ್ರವೇಶಕ್ಕೆ ದೊರೆತ ಅವಕಾಶ ಅನ್ನಿಸುತ್ತಿತ್ತು. ಒಡತಿಯ ಮನಸ್ಸಿನೊಳಗೂ ತನ್ನ ಬಗ್ಗೆ ರಮ್ಯ ಭಾವನೆಗಳಿರಬಹುದು ಎನ್ನುವ ಕಲ್ಪನೆಯಲ್ಲಿ ಒಂದು ದಿನ ಮನೆಯಲ್ಲಿ ಯಾರೂ ಇಲ್ಲದೆ ಇದ್ದಾಗ ಶೀಲಾಳನ್ನು ತಬ್ಬಿಕೊಂಡ. ಒಡತಿ ಕೊಸರಿಕೊಂಡಾಗ ಗಾಬರಿಯಿಂದ ಅಲ್ಲಿಂದ ಕಳಚಿಕೊಂಡು, ಶೀಲಾಳ ಕಣ್ತಪ್ಪಿಸಿ ಓಡಾಡತೊಡಗಿದ. ಅದೇ ಸಮಯದಲ್ಲಿ ದೆಹಲಿಯಿಂದ ಬಂದಿದ್ದ ಅತಿಥಿಯ ಗೌರವಾರ್ಥ ಪ್ಲಾಂಟರ್ ಸೋಮಣ್ಣನವರು ಸಂತೋಷಕೂಟವೊಂದನ್ನು ಏರ್ಪಡಿಸಿದರು. ಪಾರ್ಟಿಯಲ್ಲಿ ಭಾಗವಹಿಸಿದ ಪ್ರೊ. ಭಾಸ್ಕರ್ ಅಳತೆ ಮೀರಿ ಕುಡಿದರು.

ಮಾಡಿದ ಅಪಚಾರದ ಕುರಿತು ರಾತ್ರಿ ತನಗೆ ಫೋನ್ ಮಾಡುವ ಸಂದರ್ಭದಲ್ಲಿ ತಿಳಿಸಿದ್ದನ್ನು ಕುರಿತು ನಟರಾಜ್ ಜೊತೆಗೆ ಮಾತನಾಡಿಕೊಂಡರು. ಮೇಲಾಗಿ ಚಿನ್ನ ಸಹ ಕದ್ದುಹೋಗಿರುವುದು, ಮೀನು, ತರಕಾರಿ ಚೀಲ ಕಾಣೆಯಾಗಿರುವುದು ಆತನ ಕೃತ್ಯಕ್ಕೆ ಹೆಚ್ಚಿನ ಸಾಕ್ಷ್ಯ ಒದಗಿಸುತ್ತದೆ ಎಂದುಕೊಂಡರು.

ಚಂದ್ರಪ್ಪನವರು ಹೇಳಿದ ಪವನ್ ಯಾರು? ಎಂದು ತಿಳಿಯುವ ಕುತೂಹಲ ನಟರಾಜ್‌ರಿಗೆ. ತಮ್ಮ ಚಿನ್ನವನ್ನು ಲಪಟಾಯಿಸುವುದಕ್ಕೆ ಬಹುಕಾಲದಿಂದ ಪ್ರಯತ್ನಿಸುತ್ತಿದ್ದ ಆತನಿಂದಾಗಿಯೇ ಪ್ರೊ. ಭಾಸ್ಕರ್ ಹಾಗೂ ಶೀಲಾ ತಮ್ಮ ಸ್ವಂತ ಮನೆ ಬಿಟ್ಟು ಈ ಕೋಟೆ ಮನೆಯಲ್ಲಿ ಬಂದು ನೆಲೆಸಬೇಕಾಗಿ ಬಂದದ್ದು ಸಣ್ಣ ಸಂಗತಿಯೇನಲ್ಲ ಎಂಬುದು ಚಂದ್ರಪ್ಪನವರ ಮಾತಿನಿಂದ ವೇದ್ಯವಾಗಿತ್ತು. ದೀಪೂವನ್ನು ಹುಡುಕುವುದರ ಜೊತೆಗೆ ಪವನ್‌ನನ್ನು ಗಮನಿಸಬೇಕಾದುದೂ ಬಹು ಮುಖ್ಯವಾದ ಕೆಲಸವೆಂದು ನಟರಾಜ್ ಭಾವಿಸಿದರು. ಇಂಥ ಸಂದರ್ಭದಲ್ಲಿ ತಾನು ಪ್ರೊಫೆಸರಿಗೆ ಸಹಾಯ ಮಾಡದಿದ್ದರೆ ಹೇಗೆ ಎಂದೂ ನಟರಾಜ್ ಭಾವಿಸಿದ್ದಿರಬೇಕು. ಕೂಡಲೆ ಚಂದ್ರಪ್ಪನವರನ್ನು ಸಂಪರ್ಕಿಸಿ ಪೊಲೀಸ್ ಸ್ಟೇಷನ್‌ನಲ್ಲಿ ದೀಪೂ ಹಾಗೂ ಪವನ್ ಬಗ್ಗೆ ಒಂದು ಕಂಪ್ಲೇಂಟು ಕೊಡುವಂತೆ ಸೂಚಿಸಿದರು.

'ಕೊಲೆಯಾದ ರಾತ್ರಿ ಆತ ತನ್ನ ಮನೆಗೆ ಬಂದಿದ್ದ. ನಾನು ಪಾರ್ಟಿಗೆ ಹೋಗ್ತೇನೆ ಅಂದದ್ದಕ್ಕೆ ಶೀಲಾ ಡಾ. ಗಣೇಶ್‌ಗೆ ಫೋನ್ ಮಾಡಿ ಹೇಳಿದ್ದಳು' ಎಂಬ ಪ್ರೊ. ಭಾಸ್ಕರ್‌ರ ಮಾತು ನಟರಾಜರ ಸಂದೇಹಕ್ಕೆ ಹೆಚ್ಚಿನ ಪುಷ್ಟಿ ನೀಡಿತು. ಅಂದು ಕತ್ತಲೆಯ ವೇಳೆಗೆ ಪವನ್‌ನ ಮಾದೇವಿ ಎಸ್ಟೇಟಿಗೆ ಪೊಲೀಸ್ ಜೀಪು ಬಂತು. ನಾಲ್ಕಾರು ಪೊಲೀಸರು ದಡದಡನೆ ಇಳಿದು ಮನೆಯತ್ತ ಧಾವಿಸಿದರು. ಇನ್ಸ್‌ಪೆಕ್ಟರ್ ಮನೆ ಶೋಧಿಸುವಂತೆ ಪಿಸಿಗಳಿಗೆ ಆಜ್ಞಾಪಿಸಿದರು. ಒಳಗಡೆಯಿದ್ದ ಪವನ್ ಪ್ರತಿರೋಧ ವ್ಯಕ್ತಪಡಿಸಿದ್ದನ್ನು ಯಾರೂ ಗಮನಿಸಲಿಲ್ಲ. ಮನೆಯ ಶೋಧದಿಂದ ಯಾವುದೇ ಪ್ರಯೋಜನವಾಗಲಿಲ್ಲ.

'ನಿನ್ನ ಮೇಲೆ ಕಂಪ್ಲೇಂಟ್ ಇದೆ, ಹೊರಡು, ಪೊಲೀಸ್ ಸ್ಟೇಷನ್‌ಗೆ' ಸಬ್‌ಇನ್ಸ್‌ಪೆಕ್ಟರ್ ಹೇಳಿದರು.

'ಯಾರು ಕಂಪ್ಲೇಂಟ್ ಕೊಟ್ಟವರು? ನಾನ್ಯಾಕೆ ಬರಬೇಕು? ನಾನೇನು ಮಾಡಿದ್ದೇನೆಂತ ಕಂಪ್ಲೇಂಟ್ ಕೊಟ್ಟರು?' ಪವನ್ ಪ್ರತಿಸವಾಲು ಹಾಕಿದ.

'ಅದನ್ನೆಲ್ಲ ಸ್ಟೇಷನ್‌ನಲ್ಲಿ ಮಾತನಾಡೋಣ, ಜೀಪು ಹತ್ತು ಮೊದಲು.'

'ನಾನು ಜೀಪಿನಲ್ಲಿ ಬರೋದಿಲ್ಲ. ನನ್ನ ಹತ್ರ ಬೈಕ್ ಇದೆ. ನಾನು ಅದ್ರಲ್ಲೇ ಬರೋನು. ನೀವು ಮುಂದೆ ಹೋಗಿ' ಅನ್ನುವಷ್ಟರಲ್ಲಿ ಕಾನ್‌ಸ್ಟೇಬಲ್ ಕೈ ಬಲವಾಗಿ ಆತನ ಕುತ್ತಿಗೆಯನ್ನು ಹಿಡಿದಿತ್ತು. ಕೂಡಲೆ ಇನ್‌ಸ್ಪೆಕ್ಟರ್, ಒಬ್ಬ ಪಿಸಿಗೆ ಪವನ್‌ನ ಬೈಕ್‌ನಲ್ಲಿ ಕುಳಿತುಕೊಳ್ಳುವಂತೆ ಹೇಳಿ ಆತನನ್ನು ನಯವಾಗಿ ಬಗ್ಗಿಸಿದರು. ಬೈಕ್ ಹೊರಟಿತು. ಹಿಂದಿನಿಂದ ಜೀಪ್. ಸ್ಟೇಷನ್‌ನ ಒಳಗೆ ಬಂದವನೆ ಡಿ.ಎಸ್.ಪಿ.ಯವರೊಂದಿಗೆ 'ನಾನೇನು ತಪ್ಪು ಮಾಡಿದ್ದೇನೆಂತ ನನ್ನನ್ನು ಕರೆಸಿದಿರಿ?' ಎಂದು ಗದರಿದ. ಡಿ.ಎಸ್.ಪಿ. ಆತನನ್ನು ಕುಳಿತುಕೊಳ್ಳಲು ಹೇಳಿ, 'ನಿನ್ನ ಮೇಲೆ ಕಂಪ್ಲೇಂಟ್ ಇದೆ, ವಿಚಾರಣೆ ನಡೆಸೋದು ನಮ್ಮ ಕರ್ತವ್ಯ, ಅದಕ್ಕಾಗಿ ಗಾಬರಿ ಬೀಳಬೇಕಾಗಿಲ್ಲ' ಎಂದರು.

ಅವರ ಮಾತನ್ನು ನಡುವೆಯೇ ಕತ್ತರಿಸುತ್ತ, 'ಏನು ಕಂಪ್ಲೇಂಟು, ಸುಮ್ಮಸುಮ್ಮನೆ ಕಂಪ್ಲೇಂಟ್ ಕೊಟ್ಟವರು ಯಾರು?' ಎಂದ.

'ಬೋಸುಡಿಮಗನೆ, ಬಾರಿ ಅವಸರಾನಾ ನಿಂಗೆ? ಎಲ್ಲಿ ನಿಂತಿದ್ದೀಯಾಂತ ಗೊತ್ತ, ಹಲ್ಲುದುರಿಸಿಬಿಡ್ತೇನ್ನೋಡು' ಇನ್‌ಸ್ಪೆಕ್ಟರ್ ಸಿಟ್ಟು